2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 26295 ಃ 2019

| | | | |
|---|---|---|---|
| ಸಾಕ್ಷಿದಾರರ ಹೆಸರು | ಕುಸುಮಾ ವಾಸು | ಸಿ ಡಬ್ಲ್ಯು | 2 |
| ಗಂಡನ ಹೆಸರು | ವಾಸು | | |
| ವಯಸ್ಸು | 52 ವರ್ಷ | | |
| ಉದ್ಯೋಗ | ಶಿಕ್ಷಕಿ | | |
| ವಾಸಸ್ಥಾನ | ಬನಶಂಕರಿ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 17.04.2025.

**ದೋಷರೋಪಣಾ ಪೂರ್ವ** ಮುಖ್ಯ ವಿಚಾರಣೆ ಃ ಃ-

ನಾನು ಮತ್ತು ಚಾಸಾ 1 ರವರು 35 ವರ್ಷದಿಂದ ಪರಿಚಯ ಮತ್ತು ಬಾಲ್ಯ ಗೆಳತಿಯರು ಹಾಗೂ ದೂರದ ಸಂಬಂಧಿಕರಾಗಿದ್ದಾರೆ. ಆರೋಪಿಯ ಪರಿಚಯ ಇದೆ ಅವರು ಚಾಸಾ 1 ರವರ ಚಿಕ್ಕಮ್ಮನ ಮಗ. ರಜೆ ಇದ್ದ ಸಮಯದಲ್ಲಿ ನಾನು ಹಾಗೂ ಚಾಸಾ 1 ರವರ ಮನೆಗೆ ಹೋಗುತ್ತಿದ್ದೆ ಮತ್ತು ಅವರು ಸಹ ನಮ್ಮ ಮನೆಗೆ ಬರುತ್ತಿದ್ದರು. ಅದರಿಂದ ಆರೋಪಿಯು ಸಹ ನನಗೆ ಪರಿಚಯ ಆದ ಹಾಗೂ ಅವನ ಮೊಬೈಲ್ ಸಂಖ್ಯೆ ನನ್ನ ಬಳಿ ಇತ್ತು ನನ್ನ ಮೊಬೈಲ್ ಸಂಖ್ಯೆ ಆತನ ಬಳಿ ಇತ್ತು. 2019 ಮಾರ್ಚ್ ನಲ್ಲಿ ಆರೋಪಿಯು ಚಾಸಾ 1 ರವರ ಬಗ್ಗೆ ಅಸಭ್ಯವಾಗಿ ಮತ್ತು ಅವಹೇಳನಕರವಾಗಿ ವಾಟ್ಸ್ ಅಪ್ ನಲ್ಲಿ ಸ್ಟೇಟಸ್ ಹಾಕಿಕೊಂಡಿದ್ದ. ಆ ಸ್ಟೇಟಸ್ ನಲ್ಲಿ ಆರೋಪಿಯು ಚಾಸಾ 1 ರವರ ಬಗ್ಗೆ ನಿಮ್ಮ ಇತಿಹಾಸ ನನಗೆ ಗೊತ್ತಿದೆ, ಜನರು ನಿಮ್ಮ ಹಿಂದೆ ಬಿದ್ದಿದ್ದಾರೆ ಎಂಬುದು ಗೊತ್ತು. ಇದುವರೆಗೆ ನೀವು ನನ್ನ ಒಂದು ಮುಖ ಮಾತ್ರ ನೋಡಿದ್ದೀರ, ಇನ್ನು ಮುಂದೆ ನಿಮ್ಮ ಆಟ ಏನೂ ನಡೆಯುದಿಲ್ಲ. ಕಾನೂನನಿನ ಪ್ರಕಾರ ನನ್ನ ಇನ್ನೊಂದು ಮುಖವನ್ನು ತೋರಿಸುತ್ತೇನೆ ಎಂದು ಸ್ಟೇಟಸ್ ನಲ್ಲಿ ಹೇಳಿಕೊಂಡಿದ್ದ. ನಿಮ್ಮ ತಂದೆ ತಾಯಿ ಎಲ್ಲಾ ಮೋಸಗಾರರು ಎಂದು ಗೊತ್ತು. ಇನ್ನೊಂದು ಸ್ಟೇಟಸ್ ನಲ್ಲಿ ಆತ ಇಲ್ಲಿ ಬಿಳಿ ಬಟ್ಟೆ ಹಾಕಿಕೊಂಡಿರುವ ಸೋಮಶೇಖರ ಮತ್ತು ಹಸಿರು ಬಟ್ಟೆ ಹಾಕಿಕೊಂಡಿರುವ ನಿರುಪಮಾ ಒಟ್ಟಿಗೆ ವಾಸಿಸುತ್ತಿದ್ದಾರೆ ಆದರೆ ನೋಟೀಸ್ ಕೊಟ್ಟಾಗ ಈತ ಈ ಮನೆಯಲ್ಲಿ ಇಲ್ಲ ಎಂದು ನೋಟೀಸ್ ವಾಪಸ್ಸು ನೀಡಿರುತ್ತಾರೆ. ಮತ್ತೊಂದು ಸ್ಟೇಟಸ್ ನಲ್ಲಿ ಬಹಳಿ ಕೀಳಾಗಿ ಡಾಕ್ಟರ್ ಅಂತ ಒಳ್ಳೆ ಹುದ್ದೆಯಲ್ಲಿ ಇದ್ದರೆ ಸಾಲದು ಮಕ್ಕಳಿಗೆ ಒಳ್ಳೆಯ ಬುದ್ದಿ, ನಡವಳಿಕೆ ಕಲಿಸಬೇಕು ಗಂಡನನ್ನು

ಬಿಟ್ಟು ಬೇರೆ ಯಾರದೋ ಮನೆಯಲ್ಲಿ ಇದ್ದು, ರಿಲೇಟೀವ್ಸ್ ಹತ್ತಿರ ಸಾಲ ಮಾಡಿ ಬಂಡ ಬಾಳು ಬದುಕುವುದಕ್ಕಿಂತ ಗಂಡನ ಮನೆಯಲ್ಲಿಯೇ ಇದ್ದು ಗಂಜಿ ಕುಡಿದುಕೊಂಡು ಮರ್ಯಾದೆಯಿಂದ ಬಾಳಬೇಕು ಎಂಬುದನ್ನು ಕಲಿಸಬೇಕು. ಈ ತರಹ ಸ್ಟೇಟಸ್ ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ತಾನು ಚಿಕ್ಕಮ್ಮನ ಮಗನಾಗಿ ತನ್ನ ಅಕ್ಕನ ಬಗ್ಗೆ ಅವಹೇಳನಕಾರಿಯಾಗಿ ಸ್ಟೇಟಸ್ ಹಾಕಿರುವುದು ಬಹಳ ಬೇಸರವಾಯಿತು. ಇದು ಫೇಸ್ ಬುಕ್ ನಲ್ಲಿಯೂ ಸಹ ಬಂದಿರುತ್ತದೆ. ಸಾಕ್ಷಿಯು ನಿಸಿ 2 ರಿಂದ 4 ಅನ್ನು ನೋಡಿ ಗುರುತಿಸಿರುತ್ತಾರೆ. ಫೇಸ್ ಬುಕ್ ನಲ್ಲಿ ಕೆಲವು ತಿಂಗಳುಗಳ ನಂತರ ಸೆಪ್ಟೆಂಬರ್ ಅಕ್ಟೋಬರ್ 2019 ರಂದು ನಮ್ಮ ಪ್ಯಾಮಿಲಿ ಗ್ರೂಪ್ ನಲ್ಲಿ ಇರುವ ಪ್ರತಿ ಒಬ್ಬರನ್ನು ಟ್ಯಾಗ್ ಮಾಡಿ ನಿರುಪಮಾ ಬಹಳ ಮೋಸಗಾರಿ ಅವಳ ಬಗ್ಗೆ ಎಲ್ಲರೂ ತುಂಬಾ ಉಷಾರಾಗಿರಬೇಕು. ಯಾರಿಗೆ ಈ ತರಹ ಪೋಸ್ಟ್ ನನ್ನಿಂದ ನೋಡುವುದಕ್ಕೆ ಇಷ್ಟವಿರುವುದಿಲ್ಲವೋ ಅವರು ನನ್ನನ್ನು ಅನ್ ಟ್ಯಾಗ್ ಮಾಡಬಹುದು ಎಂದು ಹಾಕಿದ್ದರು. ಇನ್ನೊಂದು ಪೋಸ್ಟ್ ನಲ್ಲಿ ಈ ನಿರುಪಮಾ ಪ್ರತಿಸಾರಿ ಟೈಮ್ಸ್ ವುಮೆನ್ಸ್ ಕಾರ್ ರ್ಯಾಲಿಯಲ್ಲಿ ಭಾಗಿಯಾಗಿ ತುಂಬಾ ಶೋಕಿ ಮಾಡಿಕೊಂಡು ಜೀವನ ಮಾಡುತ್ತಾರೆ. ಆದರೆ ಇದು ಯಾವುದು ಕಷ್ಟ ಪಟ್ಟು ಸಂಪಾದಿಸಿದ್ದಲ್ಲ. ನನ್ನ ಹತ್ತಿರ 18 ಲಕ್ಷ ಸಾಲ ಮಾಡಿ ಆ ಹಣದಲ್ಲಿ ಈ ತರಹ ಬಂಡ ಜೀವನ ಮಾಡುತ್ತಿದ್ದಾರೆ ಎಂದು ಹಾಕಿದ್ದರು. ಮತ್ತೊಂದು ಫೇಸ್ ಬುಕ್ ಪೇಜ್ ನಲ್ಲಿ ನಿರುಪಮಾ ಮತ್ತು ಅವರ ತಾಯಿಯ ಪ್ರೋಪೈಲ್ ಲಿಂಕ್ ಶೇರ್ ಮಾಡಿ ಅವರ ನಡುವೆ ಇರುವ ವ್ಯಾಜ್ಯದ ಬಗ್ಗೆ ಫೇಸ್ ಬುಕ್ ನಲ್ಲಿ ಶೇರ್ ಮಾಡುತ್ತಿದ್ದರು. ಆರೋಪಿಯು ಅವಾಚ್ಯ ಶಬ್ದಗಳಿಂದ ಸಹ ಫೇಸ್ ಬುಕ್ ನಲ್ಲಿ ಬೈದಿರುತ್ತಾರೆ. ಆರೋಪಿಯು ಜೆ.ಪಿ ನಗರ ಎಂಬ ಗ್ರೂಪ್ ನಲ್ಲಿ ಇದನ್ನು ಪೋಸ್ಟ್ ಮಾಡುತ್ತೇನೆ ಬಹಳ ಮಾನ ಮರ್ಯಾದೆ ಇರುವ ಜನ ಅಂದುಕೊಂಡಿದ್ದೆ ಆದರೆ ಅದು ಬರಿ ಮಾತಲ್ಲೇ ರಕ್ತದಲ್ಲಿ ಬರಬೇಕು ಎಂದು ಹಿಂದಿನ ಕಾಲದಲ್ಲಿ ಜನ ಮರ್ಯಾದೆಗೆ ಅಂಜಿ ಊರು ಬಿಟ್ಟು ಹೋಗುತ್ತಿದ್ದರು. ಆದರೆ ಈ ಕಾಲದಲ್ಲಿ ಫೇಸ್ ಬುಕ್ ಮತ್ತು ವಾಟ್ಸ್ ಅಪ್ ನಿಂದ ಬ್ಲಾಕ್ ಮಾಡುತ್ತಾರೆ, ಮರ್ಯಾದೆ ಇಲ್ಲದ ನಾಚಿಕೆಗೆಟ್ಟ ಜನ ಎಂದು ಪೋಸ್ಟ್ ಮಾಡುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ಮ ದಂ.